ಕರ್ನಾಟಕ ಸರ್ಕಾರ

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು.-1

ಸಂಖ್ಯೆ:ಎಂ.ಸಿ.4/ಮ.ಅಲ್ಪ.ಘೋ./2014-15 ದಿನಾಂಕ:15.05.2015.

"ಜ್ಞಾಪನ"

ವಿಷಯ: ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿರುವ ಬಗ್ಗೆ.

ಉಲ್ಲೇಖ:1)ಸರ್ಕಾರಿ ಆದೇಶ ಸಂಖ್ಯೆ:ಇಡಿ27 ಮಾಹಿತಿ 2012(ಭಾಗ-1) ದಿನಾಂಕ:18.06.2014.

2)ಉಪ ನಿರ್ದೇಶಕರು, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಜಿ3/9345/ ಅಲ್ಪ.ಸಂ.ಶಾ.ಘೋ/301/2014-15, ದಿನಾಂಕ:30.01.2015.

3)ಉಪ ನಿರ್ದೇಶಕರು, ಬೆಂಗಳೂರು ಉತ್ತರ ಜಿಲ್ಲೆ ಇವರ ಪತ್ರ: ಸಂಖ್ಯೆ:ಅನು3 ಅ.ಸ.ಘೋ/01/2014-15, ದಿನಾಂಕ:27.11.2014.

4)ಉಪ ನಿರ್ದೇಶಕರು ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪತ್ರ ಸಂಖ್ಯೆ:ಅನು2 4780/ಪ್ರಾ.ಶಿ.ಅ/ಇತರೆ/24/2014-15, ದಿನಾಂಕ:03.02.2015,.

5)ಉಪ ನಿರ್ದೇಶಕರು, ಬೆಂಗಳೂರು ಉತ್ತರ ಜಿಲ್ಲೆ ಇವರ ಪತ್ರದ ಸಂಖ್ಯೆ: ಅನು3/ಪ್ರಾ ಮತ್ತು ಪ್ರೌಶಿ.ಮ.ಅ.ಘೋ.45/14-15 ದಿನಾಂಕ:13.2.2015,

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರನ್ವಯ ಈ ಕೆಳಕಂಡ ಶಾಲೆಗಳ ಆಡಳಿತ ಮಂಡಳಿಯವರ ಪ್ರಸ್ತಾವನೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಪರಿಶೀಲಿಸಿ, ಉಲ್ಲೇಖ(2),(3),(4)ಮತ್ತು(5)ರನ್ವಯ ಈ ನಿರ್ದೇಶನಾಲಯಕ್ಕೆ ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸಿರುತ್ತಾರೆ. ಅದರಂತೆ ದಿನಾಂಕ:10.03.2015ರಂದು ನಡೆದ ಭಾಷಾ/ಮತೀಯ ಅಲ್ಪಸಂಖ್ಯಾತ ಘೋಷಣಾ ಪರಿಶೀಲನಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ಶಾಲೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಸದರಿ ಶಾಲೆಗಳ ಆಡಳಿತ ಮಂಡಳಿಯವರು ಸರ್ಕಾರಿ ಆದೇಶದನ್ವಯ ಮತೀಯ ಅಲ್ಪಸಂಖ್ಯಾತ ಘೋಷಣೆಯ ಮಾನದಂಡಗಳನ್ವಯ ಎಲ್ಲಾ ಪೂರಕ ದಾಖಲೆಗಳನ್ನು ಒದಗಿಸಿರುವುದರಿಂದ ಘೋಷಣಾ ಪರಿಶೀಲನಾ ಸಮಿತಿಯು ಈ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಎಂದು ಘೋಷಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | ಶಾಲೆಯ ಹೆಸರು ಮತ್ತು ವಿಳಾಸ | ಅನುದಾನಿತ/ ಅನುದಾನರಹಿತ<br>ಪಠ್ಯಕ್ರಮ | ಸಮಿತಿ ಸಭೆಯ ನಿರ್ಣಯ |
|---|---|---|---|---|
| 1 | ರಾಯಲ್ ಎಜುಕೇಷನ್ ಸೊಸೈಟಿ, ಕಬೀರ್ ಆರ್.ಡಿ. ಮಂಡಿ ಮೊಹಲ್, ಮೈಸೂರು | ರಾಯಲ್ ಆಂಗ್ಲ ಹಿರಿಯ ಪ್ರಾಥಮಿಕ ಶಾಲೆ ಮತ್ತು ರಾಯಲ್ ಬಾಲಕಿಯರ ಪ್ರೌಢಶಾಲೆ, ಹಳೇ ವಸ್ತುಪ್ರದರ್ಶನ ಕಟ್ಟಡ, ಮೈಸೂರು | ಅನುದಾನಿತ<br>ರಾಜ್ಯಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ ಶಾಲೆಯೆಂದು ಘೋಷಿಸಿದೆ |
| 2 | ಸೆಂಟ್ ಜಾನ್ ಎಜುಕೇಷನಲ್ ಟ್ರಸ್ಟ್, ಭುವನೇಶ್ವರಿ, ನಗರ, ಹೆಬ್ಬಾಳ, ಬೆಂಗಳೂರು | ಸೇಂಟ್‌ಜಾನ್ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಕೆಂಪಾಪುರ, ಹಬ್ಬಾಳ್, ಬೆಂಗಳೂರು-560 024 | ಅನುದಾನರಹಿತ<br>ಐ.ಸಿ.ಎಸ್.ಸಿ | ಕ್ರಿಶ್ಚಿಯನ್ ಮತೀಯ ಅಲ್ಪಸಂಖ್ಯಾತ ಶಾಲೆಯೆಂದು ಘೋಷಿಸಿದೆ |
| 3 | ಆಮ್‌ಫಾಎಜುಕೇಷನಲ್ ಅಂಡ್ ವೆಲ್‌ಫೇರ್ ಟ್ರಸ್ಟ್, ಐ.ಕೆ.ಮುಖ್ಯ ರಸ್ತೆ ಅಲ್ಲಿಪುರ ಗೌರಿಬಿದನೂರು ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | ಜೆಮ್‌ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್‌ಸ್ಕೂಲ್ ಅಲೀಪುರ, ಗೌರಿಬಿದನೂರುತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ-561 213 | ಅನುದಾನರಹಿತ<br>ಐ.ಸಿ.ಎಸ್.ಸಿ. | ಮುಸ್ಲಿಂ ಮತೀಯ ಅಲ್ಪಸಂಖ್ಯಾತ ಶಾಲೆಯೆಂದು ಘೋಷಿಸಿದೆ. |

| | | | | |
|---|---|---|---|---|
| 4 | ಆರ್.ಟಿ.ನಗರ ವಿಜಯ ಭಾರತಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ, ಆರ್.ಟಿ.ನಗರ ಬೆಂಗಳೂರು-32 | ವಿಯಜ ಭಾರತಿ ಪಬ್ಲಿಕ್ ಶಾಲೆ ಕನಕನಗರ, ಮನೋರಾಯನಪಾಳ್ಯ ಆರ್.ಟಿ.ನಗರ ಬೆಂಗಳೂರು-560 032 | ಅನುದಾನರಹಿತ<br>ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ ಶಾಲೆಯೆಂದು ಘೋಷಿಸಿದೆ. |

ಷರತ್ತುಗಳು:

1.ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೋಂದಣಿ ಕಾಯಿದೆ ಪ್ರಕಾರ ನೋಂದಣಿಯಾಗಿರ ಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಬೇಕು.

2.ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಆಯಾ ಮತೀಯ ಅಲ್ಪಸಂಖ್ಯಾತರ ಸದಸ್ಯರ ಸಂಖ್ಯೆ ಕನಿಷ್ಠ ಮೂರರನೇ ಎರಡರಷ್ಟಿರಬೇಕು.

3.ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಭಾಷಿಕ/ಧಾರ್ಮಿಕ ಪ್ರಮಾಣ ಪತ್ರವನ್ನು ಪ್ರತ್ಯೇಕವಾಗಿ ಪ್ರಸ್ತಾವನೆಯಲ್ಲಿ ಸಲ್ಲಿಸುವುದು.

4.ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯಿದೆಯಡಿಯಲ್ಲಿ ಇಲಾಖೆಯಿಂದ ನೋದಾಯಿಸಿರಬೇಕು ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು.

5.ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಣೆಗೊಂಡ ಶೈಕ್ಷಣಿಕ ವರ್ಷದಿಂದ ಮೂರು (3) ವರ್ಷಗಳಿಗೊಮ್ಮೆ ನವೀಕರಿಸಲು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು.

6.ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಲ್ಲಿ, ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಕನಿಷ್ಠ ಶೇ. 25% ಶೈಕ್ಷಣಿಕ ವರ್ಷದಲ್ಲಿ ದಾಖಲಾಗಿರಬೇಕು.

7.ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶದಲ್ಲಿ ನಮೂದಿಸಿರುವ ಮಾನದಂಡಗಳನ್ನು ಪಾಲಿಸಲು ಬದ್ಧರಾಗಿರಬೇಕು.

8.ಸಂಸ್ಥೆಯು ಪ್ರತಿವರ್ಷ ಜುಲೈ 31ರಲ್ಲಿದಂತೆ ಶಾಲೆಯ ಸಂಪೂರ್ಣ ಶೈಕ್ಷಣಿಕ ಮಾಹಿತಿಯನ್ನು ಮಕ್ಕಳ ಪ್ರವೇಶ ದಾಖಲಾತಿಯ ಉದ್ಧೃತ ದೃಢೀಕರಣ ಪಟ್ಟಿಯೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮೂಲಕ ಈ ನಿರ್ದೇಶನಾಲಯಕ್ಕೆ ಸಲ್ಲಿಸಲು ಬದ್ಧರಾಗಿರಬೇಕು.

9.ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಕೇಳಿದ ಮಾಹಿತಿ ಒದಗಿಸುವುದು, ಮತ್ತು ಶಾಲೆಗೆ ಅಧಿಕಾರಿಗಳು ಭೇಟಿ ನೀಡಿದಾಗ ಶಾಲೆಯಲ್ಲಿ ನಿರ್ವಹಿಸುತ್ತಿರುವ ದಾಖಲೆಗಳನ್ನು ತಪಾಸಣೆಗೆ ಒದಗಿಸುವುದು.

"ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಮತೀಯ ಅಲ್ಪಸಂಖ್ಯಾತ ಘೋಷಣ ಪ್ರಮಾಣ ಪತ್ರವನ್ನು ಹಿಂಪಡೆಯಲಾಗುವುದು."

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
2. ಸಂಬಂಧಿಸಿದ ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಮುಂದಿನ ಕ್ರಮಕ್ಕಾಗಿ ತಿಳಿಸಿದೆ.
3. ಸಂಬಂಧಿಸಿದ ಶಾಲಾ ಮುಖ್ಯಸ್ಥರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಸಂಬಂಧಿಸಿದ ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಸೂಕ್ತಕ್ರಮಕ್ಕಾಗಿ.
5. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರ ಸೂಕ್ತ ಕ್ರಮಕ್ಕಾಗಿ.